ಶಾಶ್ವತವೆನ್ನುವಂತೆ ಹಾಗೆಯೇ ಉಳಿದುಬಿಟ್ಟಿತು. ಅದು ನನ್ನ ಮೈಮನಸ್ಸಿನ ತುಂಬೆಲ್ಲ ಹರಿದಾಡಹತ್ತಿತು. ಈ ಹೇಳಿಕೆ ನೆಲಕ್ಕೆ ಬೀಳುತ್ತಿದ್ದ ಕಣ್ಣೀರುಗಳನ್ನು ಒಳಕ್ಕೆ ಎಳೆದುಕೊಂಡು ಎದೆಯ ಬಟ್ಟಲಲ್ಲಿ ಶೇಖರಿಸಿ ಇಡುವಂತೆ ಮಾಡಿತು. ಅದು ಇನ್ನೂ ಆಶೆ ಇದೆ ಎಂದು ನನಗೆ ಕೂಗಿ ಕೂಗಿ ಹೇಳಿತು. ಬೆಂಕಿ, ಆಕಾಶದವರೆಗೂ ಚಾಚಿ, ಭಗ್ಗೆಂದು ಉರಿಯುತ್ತಿತ್ತು. ನನ್ನ ತಂಗಿ ಬೆಂಕಿಯ ಮಧ್ಯೆ ರೇಶ್ಮೆಯ ಗಂಟಿನಂತೆ ಸುಟ್ಟುಹೋಗುತ್ತಿದ್ದಳು. ಸಾವು ನಿಷ್ಕರುಣಿ. ಇದಕ್ಕೆ ಹೃದಯವಿಲ್ಲ. ಸುಡುವುದಷ್ಟೇ ಇದರ ಕರ್ಮ. ಇದಕ್ಕೆ ತಿಳಿವಳಿಕೆ ಇದ್ದರೆ ಯಾರೂ ಇದನ್ನು ಜರಿಯುತ್ತಿರಲಿಲ್ಲ. ಇದನ್ನು ಹಂಗಿಸುತ್ತಿರಲಿಲ್ಲ. ಇದರ ಉರವಣಿಗೆಯ ಬಗ್ಗೆ ಮಾತನಾಡುತ್ತಿರಲಿಲ್ಲ.

ರಾಘವಾಚಾರ್ಯರು ಮಾಡಬೇಕಾದ ಕಾರ್ಯಗಳ ಬಗ್ಗೆ ಸವಿಸ್ತಾರವಾಗಿ ಹೇಳಿ ಅವಸರದಲ್ಲಿ ಮನೆಗೆ ಹೊರಡಲು ಅನುವಾದರು. ಜನರು ಕೂಡ ಗುಂಪಾಗಿ, ಕೆಲವರು ಒಬ್ಬೊಬ್ಬರಾಗಿ ಹೊರಟರು. ನಾನು ಸ್ಮಶಾನದ ಕಟ್ಟೆಯ ಮೇಲೆಯೇ ಕುಳಿತಿದ್ದೆ. ನನ್ನ ಕೆಲವು ಸಂಬಂಧಿಗಳು ಅಲ್ಲಿಯೇ ಗುಂಪಾಗಿ ನಿಂತಿದ್ದರು. ಕಾಲಕೆಳಗಿನ ಮಣ್ಣು ಇನ್ನೂ ಸುಡುತ್ತಿತ್ತು. ಅಲ್ಲಲ್ಲಿ ಒಡೆದ ಗ್ಲಾಸಿನ ತುಕಡಿಗಳು ಚದುರಿಬಿದ್ದಿದ್ದವು. ಎದ್ದು ಅಗ್ನಿಯ ಸಮೀಪ ಹೋದೆ. ಆಕೆಯ ದೇಹ ಅಗ್ನಿಯಲ್ಲಿ ಲಯವಾಗಹತ್ತಿತ್ತು. ಕಟ್ಟಿಗೆಗಳ ಮಧ್ಯೆ ತಂಗಿ ಸುಟ್ಟು ಬೂದಿಯಾಗ ಹತ್ತಿದ್ದಳು.

**ನನಗೆ ರಾಘವಾಚಾರ್ಯರನ್ನು ಭೇಟಿಯಾಗಬೇಕೆನಿಸಿತು. ಮನೆಯಿಂದ ಸಾವಕಾಶವಾಗಿ ಇಳಿದು ಓಣಿಗಳ ಕಡೆ ಬಂದೆ. ನಡೆದುಬರುತ್ತಿದ್ದಂತೆ ನನ್ನ ಕಣ್ಣುಗಳನ್ನೇ ನಂಬಲಾಗಲಿಲ್ಲ. ಎಲ್ಲ ಮನೆಗಳ ಬಾಗಿಲಲ್ಲಿ ಉರಿಯುವ ಹಣತೆಗಳನ್ನಿಟ್ಟಿದ್ದಾರೆ. 'ತಂಗಿಯ ಮನೆ ಸ್ವಾಗತ' ಎಂದು ಬರೆದಿದ್ದಾರೆ. ಭಾಗಜ್ಜಿ, ಇಡೀ ಊರೇ ಬೆಳಗುವಂತೆ ಮಾಡಿದ್ದಾಳೆ.**

ತದೇಕಚಿತ್ತದಲ್ಲಿ ಬೆಂಕಿಯನ್ನು ನೋಡುತ್ತಿದ್ದೆ. ಈಗಾಗಲೇ ಕಳೆದುಹೋಗಿದ್ದ ನನ್ನ ತಂದೆತಾಯಿ ನನ್ನ ತಂಗಿಯ ಜೊತೆ ಅಲ್ಲಿ ಕಾಣುತ್ತಿದ್ದರು. ಬೆಂಕಿಯ ಮೈಯಲ್ಲಿ ಅವರ ಚಿತ್ರಗಳು ಕಾಣುತ್ತಿದ್ದವು. ನನ್ನ ಮನಸ್ಸಿನಲ್ಲಿಯ ಈವರೆಗಿನ ಬೇಗುದಿ ಕಡಿಮೆಯಾಗಹತ್ತಿತ್ತು. ಏನೋ ಒಂದು ಅವ್ಯಕ್ತವಾದ ಹಾಗೂ ಹೇಳಲು ಸಾಧ್ಯವಾಗದ ಆಲೋಚನೆ, ವಿಚಾರ ಉದಯವಾಗಹತ್ತಿತ್ತು. ಎದೆ ಹೊಗೆಯಿಂದ ತುಂಬಿದ್ದರೂ ತಲೆ ಕೆಂಡವಾಗಿದ್ದರೂ ದೇಹ ಹುಣ್ಣಿನಂತೆ ನೋಯುತ್ತಿದ್ದರೂ ತುಂತುರ ಹನಿಗಳು ಹನಿದ ರೀತಿಯಲ್ಲಿ ಹೃದಯ ಸಾವಕಾಶವಾಗಿ ತಂಪಾಗಹತ್ತಿತ್ತು. ಯಾವುದೋ ಒಗಟು ಒಡೆದಂತಾಗಿತ್ತು. ಗುಟ್ಟು ಹೊರಬಿದ್ದಂತೆನಿಸಿತ್ತು.

ಈ ಸಾವಿಗೆ ಬಿಡುಗಡೆಯ ಬಾಗಿಲುಗಳೇ ಇಲ್ಲವೆ? ಹೌದು! ಪರಿಹಾರಕ್ಕಾಗಿ ಜೀವ ಪರಿತಪಿಸುತ್ತಿದೆ. ನನ್ನ ತಂಗಿಯ ಸಾವಿಗೆ ಪರಿಹಾರ ಇಲ್ಲವೆ? ಗರುಡ ಪುರಾಣವೇ ಪರಮ